ಹೊಡೆಯುತ್ತಿದ್ದೇವೆ. ಹಿಂದೆಯೂ ತಿಂದಿದ್ದಾರೆ. ಕಬ್ಬಿಣ ಮತ್ತು ಸಿಮೆಂಟ್ ಸಾಕಷ್ಟು ಅವ್ಯವಹಾರಗಳು ಮೂಡದಲ್ಲಿ ನಡೆದಿದೆ. ಆ ಬಗ್ಗೆ ಸಿಓಡಿಯಿಂದ ತನಿಖೆ ಆಗಿದೆ. ಅಧಿಕಾರಿಗಳನ್ನು ಅಮಾನತ್ತಿಡಲಾಗಿದೆ. ಅಲ್ಲಿನ ಫೀರ್‌ಮೆನ್‌ರ ಮೇಲೆ ಏನು ಕ್ರಮ ಜರುಗಿಸಬೇಕು ಎಂದು ತೀರ್ಮಾನವಾಗಿದೆ.

ಅಧ್ಯಕ್ಷರು: ಕಬ್ಬಿಣ ಮತ್ತು ಸಿಮೆಂಟ್ ಯಾರು ತಿಂದರು? ಅವರಿಗೆ ಅನ್ನ ತಿಂಡಿ, ನೀರು ಸಿಗುತ್ತಿರಲಿಲ್ಲವೇ? ಪಾಪ ಅವರ ಕಷ್ಟವನ್ನೂ ನಾವು ನೋಡಬೇಕಲ್ಲಾ. ಅವರಿಗೆ ಕಾಲಕಾಲಕ್ಕೆ ಊಟ ತಿಂಡಿ ಸಿಕ್ಕಿ ಅವರು ತಿಂದಿದ್ದರೆ ತಪ್ಪು. ಅವರಿಗೆ ಊಟ, ತಿಂಡಿ ಇಲ್ಲದೆ ಅದರ ಬದಲಿ ಇದನ್ನು ತಿಂದಿದ್ದರೆ....

ಶ್ರೀ ಬಿ.ಎನ್.ಬಚ್ಚೇಗೌಡ: ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಸಾಕಷ್ಟು ಪ್ರಯತ್ನ ಮಾಡಲಾಗಿದೆ. ಲೋಕಾಯುಕ್ತವೂ ಅದರ ಮೇಲೆ ಇದೆ, ಸರ್ಕಾರವೂ ಆ ಬಗ್ಗೆ ನಿಗಾ ವಹಿಸಿದೆ. ಆದಷ್ಟು ಬೇಗ ಅದನ್ನು ಬದಲಾಯಿಸಿ ತಾವು ಹೇಳಿದ ರೀತಿ ಮಾಡೋಣ. ಕಂಟ್ರಾಕ್ಟರ್‌ನ್ನು ಬದಲಾಯಿಸಿ, ಹೊಸ ಕಂಟ್ರಾಕ್ಟರ್‌ನ್ನು ನೇಮಕ ಮಾಡಿ, ಆದಷ್ಟು ಬೇಗ ಆ ಸಂಕೀರ್ಣವನ್ನು ಸರಿಪಡಿಸಲಾಗುವುದು.

ವಿಷಯ: ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಉತ್ತೇಜನ.

485 (3951)

ಶ್ರೀ ಜೆ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಕೃಷಿ ಅಭಿವೃದ್ಧಿಗೆ ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಉತ್ತೇಜನ ನೀಡಲು ಸರ್ಕಾರವು ಬಯಸಿದೆಯೇ?

ಆ) ಈ ಯೋಜನೆಯು ಎಂದಿನಿಂದ ಜಾರಿಗೆ ತರಲಾಗಿದೆ? ಇದಕ್ಕೆ ಖರ್ಚು ಮಾಡಿದ ಹಣವೆಷ್ಟು?

ಇ) ಈ ಯೋಜನೆಯಿಂದ ಎಷ್ಟು ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಉಪಯೋಗವಾಗಿದೆ ಜಿಲ್ಲಾವಾರು ವಿವರ ನೀಡುವುದು.

ಶ್ರೀ ಎಂ.ವರದೇಗೌಡ (ರೇಷ್ಮೆ ಕೃಷಿ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ನನ್ನಎಲ್ಲಾ ಪ್ರಶ್ನೆಗಳಿಗೂ 'ಇಲ್ಲ'' ''ಉದ್ಭವಿಸುವುದಿಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ. ಈ ರೇಷ್ಮೆ ಬೆಳೆಯತಕ್ಕಂಥ ಸಣ್ಣ ಮತ್ತು ಅತಿ ಸಣ್ಣ ರೈತರು ಇವತ್ತು ಬಹಳ ಸಂಕಷ್ಟದಲ್ಲಿದ್ದಾರೆ. ಅವರಿಗೆ ಸರ್ಕಾರದಿಂದ ಕೆಲವು ಸವಲತ್ತುಗಳನ್ನು ಕೊಡತಕ್ಕಂಥದ್ದಕ್ಕೆ ಆದ್ಯತೆ ಇದೆಯೇ ಎನ್ನತಕ್ಕಂಥದ್ದನ್ನು ಪರಿಶೀಲನೆ ಮಾಡಬೇಕು. ಎರಡನೆಯದಾಗಿ, ಎಸ್‌ಸಿ ಮತ್ತು ಎಸ್‌ಟಿಯವರಿಗೆ 50 ಪರ್ಸೆಂಟ್ ಸಬ್ಸಿಡಿ ಕೊಡುತ್ತೀರಿ. ಅವರಿಗೆ ಇನ್ನೂ ಜಾಸ್ತಿ ಕೊಡಿ. ಆದರೆ ಸಣ್ಣ ಮತ್ತು ಅತಿ ಸಣ್ಣ ರೈತರು ರೇಷ್ಮೆ ಮೇಲೆಯೇ ಆಧಾರವಾಗಿರತಕ್ಕಂಥ ಸಂದರ್ಭ ಇದೆ. ಒಂದು ಎಕರೆಗೆ, ಅರ್ಧ ಎಕರೆಗೆ, ಮುಕ್ಕಾಲು ಎಕರೆಯಲ್ಲಿ ಕಷ್ಟ ಬಿದ್ದು ರೇಷ್ಮೆ ಬೆಳೆಯುತ್ತಾರೆ. ಅವರಿಗೆ ಈ ಸೌಲಭ್ಯಗಳು ಇಲ್ಲ. ಅವರಿಗೆ ಈ ಸೌಲಭ್ಯಗಳನ್ನು ಕೊಡಬೇಕು, ಅವರಿಗೆ ಸಬ್ಸಿಡಿಯನ್ನು ಕೊಡಬೇಕು. ಈಗ ನೀವು ಏನು ಮಾಡುತ್ತಿದ್ದೀರಿ ಸಣ್ಣ ರೈತರಿಗೆ ಮನೆ ಕಟ್ಟುವುದಕ್ಕೆ 10 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೀರಿ. ಅವರಿಗೂ 50 ಪರ್ಸೆಂಟ್ ಸಬ್ಸಿಡಿ ಮಾಡಿ. ಕೊಳವೆ ಬಾವಿಗೆ 10 ಪರ್ಸೆಂಟ್ ಕೊಡುತ್ತೀರಿ. ಅವರಿಗೆ 50 ಪರ್ಸೆಂಟ್ ಕೊಡಿ. ನೀವು ಮಾರ್ಕೆಟ್‌ನಲ್ಲಿ ಶುಲ್ಕ ವಸೂಲಿ ಮಾಡುತ್ತೀರಿ. ಆ ಶುಲ್ಕ ವಸೂಲಿ ಮಾಡುವುದನ್ನು ಈ ಸಣ್ಣ ರೈತರಿಗೆ ಉಪಯೋಗ ಮಾಡಬೇಕು ಎಂದು ಇದೆ. ಅದನ್ನಾದರೂ ಆ ಹಣದಲ್ಲಿ ಈ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೇಷ್ಮೆ ಬೆಳೆಯಲು ಪ್ರೋತ್ಸಾಹ ಕೊಡುವುದಕ್ಕೆ ಸರ್ಕಾರ ಏಕೆ ಕ್ರಮ ತೆಗೆದುಕೊಳ್ಳಬಾರದು. ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು: ಒಳ್ಳೆಯ ಸಲಹೆ. ಆಲೋಚನೆ ಮಾಡುತ್ತೇವೆಂದು ಹೇಳಿ.

ಶ್ರೀ ಎಂ.ವರದೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಅವರು ಹೇಳಿರುವಂತೆ ನಮ್ಮಲ್ಲೇನು ಪಿಎಸ್‌ಸಿ ಫಂಡ್ ಇದೆ, ಅದು ರೈತರಿಗಾಗಿ ಖರ್ಚು ಮಾಡುವುದಕ್ಕೆ ಇರತಕ್ಕಂಥಾದ್ದು. ಈಗಾಗಲೇ ನಾವು, ಸೀಡ್ ಏರಿಯಾದಲ್ಲಿ ರೇಷ್ಮೆಗೂಡಿಗೆ ಸಬ್ಸಿಡಿ ಕೊಡತಕ್ಕಂಥದ್ದು, ಹೊಸ ಏರಿಯಾದಲ್ಲಿ ರೇಷ್ಮೆ ಬೆಳೆದರೆ ಅದಕ್ಕೆ ಸಬ್ಸಿಡಿ ಕೊಡತಕ್ಕಂಥದ್ದು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಡತಕ್ಕಂಥದ್ದು. ಈಗಾಗಲೇ ಮುಂದಿನ ಆಯವ್ಯಯಕ್ಕೆ ಈ ಡ್ರಿಪ್ ನೀರಾವರಿ ಬಗ್ಗೆ ಮತ್ತು ಏನು ಶ್ರೀರಾಮರೆಡ್ಡಿಯವರು ಹೇಳಿದ್ದಾರೆ, ಅವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದರಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಬ್ಸಿಡಿ ಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ ಎಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಟಿ.ಹೆಚ್.ಬಸವರಾಜ್: ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕ್‌ನಲ್ಲಿ ಕೂಡ ರೇಷ್ಮೆ ಬೆಳೆಯಲು ಬಹಳಷ್ಟು ಉತ್ತಮವಾದ ವಾಯುಗುಣ ಇದೆ. ಇಲಾಖೆಯವರೂ ಕೂಡ ಅಲ್ಲಿಗೆ ಬಂದು ಸಮ್ಮತಿ ಕೊಟ್ಟಿದ್ದಾರೆ. ಇದುವರೆಗೂ ಆ

ಇಲಾಖೆಯ ಯಾವುದೇ ಅಧಿಕಾರಿಯೂ ಕೂಡ ಕೆಲಸ ಪ್ರಾರಂಭ ಮಾಡಿಲ್ಲ. ಏಕೆಂದರೆ ಅಲ್ಲಿ ಬಹಳಷ್ಟು ಜನ ಸಣ್ಣ ರೈತರು ಇದ್ದಾರೆ ಮತ್ತು ಮಳೆಯ ಪ್ರಮಾಣ ಬಹಳಷ್ಟೂ ಕಡಿಮೆ ಇರುತ್ತದೆ. ಇಲಾಖೆ ಅಧಿಕಾರಿಗಳು ಹೆಚ್ಚಿನ ಕಾಳಜಿ ವಹಿಸಿದರೆ, ರೈತನಿಗೆ ಬಹಳಷ್ಟು ಅನುಕೂಲವಾಗುತ್ತದೆ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವರದೇಗೌಡ: ಸನ್ಮಾನ್ಯ ಅಧ್ಯಕ್ಷರೆ, ಹೊಸ ಏರಿಯಾದಲ್ಲಿ ಸರಿಯಾದ ರೀತಿಯಲ್ಲಿ ಅಧಿಕಾರಿಗಳು ಕೆಲಸ ಮಾಡಲಿಲ್ಲ. ಏಕೆಂದರೆ ನಮಗೆ ವಿಶ್ವಬ್ಯಾಂಕಿನಿಂದ ಏನು ಯೋಜನೆ ಹಾಕಿದರು ಎಂದರೆ ಮನೆಗಳ ಮೇಲೆ ಮನೆ ಕಟ್ಟಿದರೇ ಹೊರತು ಭೂಮಿ ಮೇಲೆ ರೇಷ್ಮೆ ಕಡ್ಡಿ ಹಾಕಿ ರೇಷ್ಮೆ ಬರುವಂತಾದ್ದು ಮಾಡಲಿಲ್ಲ. ಈಗ ನಾನು ಎಲ್ಲಾ ಜಿಲ್ಲೆಗಳ್ಲೂ ರಿವ್ಯೂ ಮಾಡಿದ್ದೇನೆ. ಆ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಲ್ಲಿ ಭೂಮಿ ಮೇಲೆ ಕಡ್ಡಿ ಹಾಕತಕ್ಕಂಥ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀ ಎಸ್.ಪಿ.ಮುದ್ದಹನುಮೆಗೌಡ: ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಜ್ಯದ ಈ ರೇಷ್ಮೆ ಕೃಷಿ ಸಣ್ಣ ರೈತರ ಮೇಲೆಯೇ ಅವಲಂಬಿತವಾಗಿದೆ. ಆದ್ದರಿಂದ ನಾನು ಬಹಳ ಸಲ ಈಗಿನ ಸಚಿವರ ಗಮನಕ್ಕೆ ಮತ್ತು ಹಿಂದಿನ ಸಚಿವರ ಗಮನಕ್ಕೂ ತಂದಿದ್ದೇನೆ. ಈ ರೇಷ್ಮೆಯನ್ನು ಏನು ಬೆಳೆಯುತ್ತಾರೆ, ಅದರಲ್ಲೂ ಮೈಸೂರು ಬಿತ್ತನೆ ವಲಯ ಏನಿದೆ, ಅಲ್ಲಿ ರೈತರಿಗೆ ನೀವು ಪರಪುಸೆಟ್ಟು ಹಾಕಿಕೊಳ್ಳಲಿಕ್ಕೆ ಸ್ವಲ್ಪ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡತಕ್ಕಂಥದ್ದು. ಆ ಸಾಲ ಕೊಡುವುದಕ್ಕೆ ಪಾಸ್ ಬುಕ್ ಏನು ಮಾಡಿದ್ದಾರೆ, ಅದನ್ನು ರೇಷ್ಮೆ ಗೂಡಿನ ಮಾರ್ಕೆಟ್‌ಗೆ ಕೊಡುತ್ತಾರೆ. ಆ ಪಾಸ್‌ಬುಕ್ ಆಧಾರದ ಮೇಲೆ ಸಾಲವನ್ನು ಕೊಡುವಂತಹ ಯೋಜನೆಯನ್ನು ದಯಮಾಡಿ ಜಾರಿಗೆ ತನ್ನಿ. ಅದರಿಂದ ಇವತ್ತು ನಶಿಸಿಹೋಗತಕ್ಕಂಥ ಅಥವಾ ಕಡಿಮೆಯಾಗತಕ್ಕಂಥ ರೇಷ್ಮೆ ಕೃಷಿಗೆ ಉತ್ತೇಜನ ಕೊಟ್ಟಂತಾಗುತ್ತದೆ. ದಯಮಾಡಿ ಆ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಮಾನ್ಯ ಸಚಿವರು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಎಂ.ವರದೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಿತ್ತನೆ ವಲಯದಲ್ಲಿ ಸುಮಾರು 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಲ್ಲಿ ಸಣ್ಣ ರೈತರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾ ಬಂದಿದ್ದೇವೆ. ಈಗ ಏನು ಮುದ್ದಹನುಮೇಗೌಡರು ಪಾಸ್ ಬುಕ್ ಮೇಲೆ ಆ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಎಂದು ಹೇಳಿದ್ದಾರೆ, ಅದನ್ನು ಪರಿಶೀಲಿಸಿ ಆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ವಿಶ್ವಬ್ಯಾಂಕ್ ನೆರವಿನಿಂದ ಬಂದಂತಹ ಎಲ್ಲಾ ಆರ್ಥಿಕ ನೆರವು ಈ ಬಿಲ್ಡಿಂಗ್ ಕಟ್ಟುವುದಕ್ಕೆ, ಮನೆಗಳನ್ನು ಕಟ್ಟುವುದಕ್ಕೆ ಆಗುತ್ತದೆಯೇ ಹೊರತು ರೇಷ್ಮೆ ಬೆಳೆಯತಕ್ಕ ರೈತರಿಗೆ ಇದರಿಂದ ಯಾವುದೇ ಪ್ರಯೋಜನವಾಗಿಲ್ಲ. ಮತ್ತು ರೇಷ್ಮೆ ಕೃಷಿ ಮಾಡುವಾಗ ಬರತಕ್ಕಂಥ ನಾನಾ ರೀತಿಯ ರೋಗಗಳು, ಒಂದಲ್ಲ ಒಂದು ರೋಗ, ಈ ರೋಗಗಳು ಜಾಸ್ತಿಯಾಗಿದೆಯೇ ಹೊರತು ರೋಗ ತಡೆಹಿಡಿಯುವುದಕ್ಕೆ ಸರ್ಕಾರ

ಪರಿಣಾಮಕಾರಿಯಾದ ಕ್ರಮಕ್ಕೆಗೊಂಡಿಲ್ಲ. ಇದರ ಜೊತೆಗೆ ನೀವು ಮೊಟ್ಟೆಗಳೇನು ಕೊಡುತ್ತೀರಿ, ಅದು ಆರೋಗ್ಯಕರವಾದ ಮೊಟ್ಟಗಳಲ್ಲದೆ 1 ಮತ್ತು 2 ನೇ ಜ್ವರ ಮೇಲಕ್ಕೆದ್ದರೆ ತಕ್ಷಣ ಅದನ್ನು ತಟ್ಟೆಯಿಂದ ಸುರಿದು ತಿಪ್ಪೆಗೆ ಹಾಕತಕ್ಕಂಥಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ರೇಷ್ಮೆ ಉದ್ಯಮ ರೇಷ್ಮೆ ಕೃಷಿಯಲ್ಲಿ ಕರ್ನಾಟಕ ಒಂದು ಕಾಲದಲ್ಲಿ ಬಹಳ ವೈಭವವಾಗಿ ಮೆರೆದಿತ್ತು. ಈಗ ನಾಶದ ಅಂಚಿನಲ್ಲಿದೆ, ಅದನ್ನು ಸರಿಪಡಿಸುವುದಕ್ಕೆ ತಾವು ಪರಿಣಾಮಕಾರಿಯಾದ ಕ್ರಮ ಏನು ಕೈಗೊಂಡಿದ್ದೀರಿ?

ಶ್ರೀ ಎಂ.ವರದೇಗೌಡ: ಸನ್ಮಾನ್ಯ ಅಧ್ಯಕ್ಷರೆ, ಎಲ್ಲಾ ಹಣವನ್ನೂ ಬಿಲ್ಡಿಂಗ್ ಕಟ್ಟುವುದಕ್ಕೆ ಉಪಯೋಗ ಮಾಡಲಿಲ್ಲ. ಸುಮಾರು 125 ಕೋಟಿ ರೂಪಾಯಿಗಳ ನೆರವನ್ನು ವಿಶ್ವಬ್ಯಾಂಕ್ ನೆರವಿನಿಂದ ಖರ್ಚು ಮಾಡಲಾಗಿದೆ. ಅದರಲ್ಲಿ 40ರಷ್ಟು ಮಾತ್ರ ಬಿಲ್ಡಿಂಗ್ ಕಟ್ಟುವುದಕ್ಕೆ ಉಪಯೋಗ ಮಾಡಿರತಕ್ಕಂಥದ್ದು. ಆಗ ಏನು ಕೆಲಸ ಆಗಬೇಕಾಗಿತ್ತೋ ಅಷ್ಟು ಪರಿಣಾಮಕಾರಿಯಾಗಿ ಕೆಲಸ ಆಗಲಿಲ್ಲ. ಅದನ್ನು ನಾನು ಒಪ್ಪುತ್ತೇನೆ. ಆದರೆ ಇತ್ತೀಚೆಗೆ ಇವತ್ತು ರಾಜ್ಯದಲ್ಲಿ ಯಾವುದೇ ರೋಗ ಇಲ್ಲ. ಆದರೆ ಸಿಎಸ್ಆರ್, ಕೆಎಸ್-1, ಬಿಎಲ್ ಎಂದು ಹೇಳಿ 3 ಹೊಸ ತಳಿಗಳನ್ನು ಇವತ್ತು ರಾಜ್ಯದಲ್ಲಿ ಬಿಡುಗಡೆ ಮಾಡಿದ್ದೇವೆ. ಇವತ್ತು ಅದು ರೈತನಿಗೆ ಉತ್ತಮವಾಗಿದೆ. ಹಿಂದೆ ಯಾವ ರೀತಿ ಇತ್ತು ಎಂಬುದು ತಮಗೆ ಗೊತ್ತಿದೆ. 15 ಕೆ.ಜಿ. ಗೂಡು ಹಾಕಿದರೆ 1 ಕೆ.ಜಿ. ರೇಷ್ಮೆ ಬರುತ್ತಿತ್ತು. ಈಗ 6 ಕೆ.ಜಿ. ಗೂಡು ಹಾಕಿದರೆ 1 ಕೆ.ಜಿ. ರೇಷ್ಮೆ ಬರುತ್ತಿದೆ. ಆದ್ದರಿಂದ ಇದು ಉಪಯೋಗವಾಗಿದೆ. ಅಂದರೆ ಹೊಸ ಏರಿಯಾದಲ್ಲಿ ಇನ್ನೂ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಬೇಕು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸನ್ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕ್ ಈ ಇಲಾಖೆಗೆ ಅತಿ ಹೆಚ್ಚು ಹಣ ಕೊಟ್ಟಿರುವುದು. ಈ ಇಲಾಖೆಯ ಬಗ್ಗೆ ಒಂದು ದಂತ ಕತೆಯನ್ನು ಹೇಳಿದರೆ ಒಂದು ಗಂಟೆಯಾಗುತ್ತದೆ. ಅಷ್ಟೊಂದು ದುಡ್ಡನ್ನು ತಿಂದು ಹಾಕಿದ್ದಾರೆ. ರೇಷ್ಮೆ ಹುಳ 4ನೇ ಜ್ವರಕ್ಕೆ ಎದ್ದಾಗ ಸೊಪ್ಪು ಮೆಯ್ಯುತ್ತದಲ್ಲಾ ಆ ರೀತಿ ದುಡ್ಡು ಮೇಯ್ದು ಹಾಕಿದ್ದಾರೆ. ಬಹಳ ದುಡ್ಡು ಮೇಯ್ದಿರುವ ಇಲಾಖೆ ಅಂದರೆ ಈ ರೇಷ್ಮೆ ಇಲಾಖೆ. ನಿಜವಾಗಲೂ ಸಣ್ಣ ಹಿಡುವಳಿದಾರರು ಎನ್ನುವ ಉದ್ದೇಶ ಏನು? ವರದೇಗೌಡರು ಅದೇ ಏರಿಯಾದಿಂದ ಬಂದಿರುವವರು. ರೇಷ್ಮೆ ಸಣ್ಣ ಹಿಡುವಳಿದಾರರಿಗೆ ಯಾವಾಗ ವರ ಕೊಡುತ್ತೀರಿ ಎಂಬುದನ್ನು ತಾವು ಹೇಳಬೇಕು. ಕಾಲ ಎಳಂಬ ಮಾಡಬಾರದು. ರೇಷ್ಮೆ ಬೆಳೆ ಬೆಳೆಯತಕ್ಕಂತಹ ರೈತರು ಕಣ್ಣು ನೋಡಿದರೆ ಸಾಕು, ನಿಜವಾಗಲೂ ನೋಡುವುದಕ್ಕೆ ಆಗುವುದಿಲ್ಲ. ಎಲ್ಲಾ ಬೆಳೆಗಿಂತ ಕಷ್ಟ ಇದು. ರಕ್ತನೇ ಇಲ್ಲದೆ ಬಹಳ ಕಷ್ಟದಲ್ಲಿರತಕ್ಕಂಥ ರೈತರು, 24 ಗಂಟೆ ಕಣ್ಣಲ್ಲಿ ಕಣ್ಣಿಟ್ಟು ನೋಡುವಂತದ್ದು. ಸಣ್ಣ ಹಿಡುವಳಿದಾರರು ಎಂದು ಹೇಳಿದ ಮೇಲೆ ನೀವು ಏನು ಮಾಡಬೇಕು? ಇಷ್ಟೊಂದು ಅನಾರೋಗ್ಯಕರವಾದ ಸ್ಥಿತಿಯಲ್ಲಿರುವಂಥ ರೈತರ ಬಗ್ಗೆ ನಾನು ಪರಿಶೀಲಿಸುತ್ತೇನೆ, ವಿಚಾರಣೆ ಮಾಡುತ್ತೇನೆ ಎಂದು ಹೆಳುವುದಲ್ಲ. ತತ್‌ಕ್ಷಣದಲ್ಲಿ ಕಟ್ಟುನಿಟ್ಟಾಗಿ ಯಾವಾಗ ಜಾರಿಗೆ ತರುತ್ತೀರಿ? ಆ

ರೈತರ ಬಗ್ಗೆ ಗಂಭೀರವಾಗಿ ಗೌರವ ಚಿಂತನೆಯು ಇದ್ದರೆ ಕಟ್ಟುನಿಟ್ಟಾಗಿ ಯಾವಾಗ ಜಾರಿಗೆ ತರುತ್ತೀರಿ? ಈ ಬೆಳೆಯನ್ನೇ ರೈತರು ಬಿಟ್ಟು ಬಿಡುತ್ತಿದ್ದಾರೆ. ಆ ಮೇಲೆ ಹೊಸ ಪದ್ಧತಿಯನ್ನು ಇಂಟ್ರಡ್ಯೂಸ್ ಮಾಡುವುದರಲ್ಲಿ ನಿಮ್ಮ ಅಧಿಕಾರಿಗಳು ಫೈಲ್ಯೂರ್ ಆಗಿದ್ದಾರೆ. ಹೊಸದಾಗಿ ತಾವು ಇಂಟ್ರಡ್ಯೂಸ್ ಮಾಡಿದ್ದೀರಿ ಮೊದಲು ಚಾಕಿಗೆ ಸೊಪ್ಪನ್ನು ಕತ್ತರಿಸಿ ತೆಗೆದುಕೊಂಡು ಹಾಕುತ್ತಿದ್ದರು. ಈಗ ರೇಷ್ಮೆ ಕಡ್ಡಿಯನ್ನೇ ಕಡಿಮೆಕೊಂಡು ಹಾಕತಕ್ಕಂಥ ವೈಜ್ಞಾನಿಕ ಪದ್ಧತಿಯ ವಿಚಾರವನ್ನು ರೈತರಿಗೆ ಅಳವಡಿಸಬೇಕು. ಅವರಿಗೆ ಸಬ್ಸಿಡಿ ಕೊಡುವುದರಲ್ಲಿ ತಾವು ಏಕೆ ಹಿಂದೂಮುಂದು ನೋಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ತಾವು ಅದೇ ಏರಿಯಾದಿಂದ ಬಂದವರು. ಅಷ್ಟೊಂದು ಕಷ್ಟವನ್ನು ಅನುಭವಿಸಿದವರು. ನೀವು ಕಾಲ ತೆಗೆದುಕೊಳ್ಳುವುದಲ್ಲ.... ತಕ್ಷಣದಲ್ಲಿ ತಾವು ಒಂದು ನಿಲುವಿಗೆ ಬರಬೇಕೆಂದು ಬೇಳೆ ಅಧ್ಯಕ್ಷರ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಎಂ.ವರದೇಗೌಡ: ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರತಕ್ಕಂಥದ್ದು ಇವತ್ತು ನಮ್ಮ ಡಿಎಸ್ಎಫ್ ಫಂಡ್ ಬಳಸಿಕೊಳ್ಳಬೇಕಾದರೂ ಕೂಡ ಹಣಕಾಸಿನ ಇಲಾಖೆಗೆ ಹೋಗಬೇಕು. ಅದರಿಂದ ಸಬ್ಸಿಡಿ ಕೊಡತಕ್ಕಂಥ ಸಲಹೆ ಏನು ಕೊಟ್ಟಿದ್ದಾರೆ, ಈಗಾಗಲೇ 10 ಪರ್ಸೆಂಟ್ ಪಂಪುಸೆಟ್ಟುಗಳಿಗೆ ಮನೆಗಳಿಗೆ, ಸಬ್ಸಿಡಿಯನ್ನು ಕೊಡುತ್ತಿದ್ದೇವೆ. ಸಣ್ಣ ರೈತರಿಗೆ ಬ್ಯಾಂಕ್‌ನವರು ಒಂದು ಎಕರೆ ಪ್ರದೇಶ ಇದ್ದರೆ ಮಾತ್ರ ಸಾಲವನ್ನು ಕೊಡುತ್ತಿದ್ದರು. ಇವತ್ತು ಅರ್ಧ ಎಕರೆ ಇದ್ದರೂ ಬ್ಯಾಂಕ್‌ನಿಂದ ಸಾಲ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಏಕೆಂದರೆ ರೇಷ್ಮೆ ಆದಾಯಕರ ಬೆಳೆ ಎಂದು ಬ್ಯಾಂಕಿನವರೇ ಒಪ್ಪಿಕೊಂಡಿದ್ದಾರೆ, ಆದ್ದರಿಂದ ಮುಂದಿನ ಆಯವ್ಯಯದಲ್ಲಿ ಸಣ್ಣ ರೈತರಿಗೆ ಏನು ಸಬ್ಸಿಡಿ ಸಿಕ್ಕಬೇಕೋ ಅದನ್ನು ಗುರುತಿಸಿ, ಹಣಕಾಸಿನ ಸಚಿವರೊಂದಿಗೆ ಮಾತನಾಡಿ, ಅದನ್ನು ಅಳವಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಪ್ರತಾಪಚಂದ್ರಶೆಟ್ಟಿಯವರೆ ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಅಧ್ಯಕ್ಷರೆ, ಒಂದು ಕ್ಲಾರಿಫಿಕೇಷನ್ ಇದೆ, ಗಂಗೊಳ್ಳಿ ಅಧಿಸೂಚಿತ ಪ್ರದೇಶದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅದು ಈಗ ಗ್ರಾಮಪಂಚಾಯಿತಿಯಾಗಿ ಮಾರ್ಪಾಡಾಗಿದೆ. ಪೌರಾಡಳಿತದಿಂದ ಗ್ರಾಮೀಣಾಭಿವೃದ್ಧಿಗೆ ವರ್ಗಾವಣೆಯಾಗಿದೆ. ಆದರೆ ಇವೊತ್ತು ವ್ಯವಸ್ಥೆ ಏನಿದೆ ಎಂದು ಹೇಳಿದರೆ, ಪ್ರಶ್ನೆಗೆ ಉತ್ತರವನ್ನು ಡಿ.ಸಿ.ಯವರಿಂದ ಕೇಳುತ್ತಿದ್ದಾರೆ. ಇವೊತ್ತು ಹೇಳಿಕೆ ಕೊಟ್ಟು 21 ದಿವಸ ಆಯಿತು, ಒಂದು ಸ್ವಲ್ಪವೂ ಬದಲಾವಣೆ ಆಗಿಲ್ಲ. ಸೋಮೇಶ್ವರ ಮತ್ತು ಕುದೂರು ಇದು ಯಾವ ಬದಲಾವಣೆಯೂ ಆಗಿಲ್ಲ. ಏಕೆಂದರೆ ಪ್ರಶ್ನೆ ಮಾತ್ರ ಬದಲಾವಣೆಯಾಗುತ್ತದೆಯೇ ಹೊರತು ಈ ನಮ್ಮ ವ್ಯವಸ್ಥೆಗಳು ಬದಲಾವಣೆ ಆಗಿಲ್ಲ. ಆದ್ದರಿಂದ ಸ್ಪಷ್ಟವಾಗಿ ಬದಲಾವಣೆ ಆಗಿದೆ ಎಂದು ಉತ್ತರವನ್ನು ಏಕೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಜಯರಾಮ ಶೆಟ್ಟಿ: ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಬಗ್ಗೆ ಸದನದಲ್ಲಿ ನಾಲ್ಕು ಸಲ ಪ್ರಸ್ತಾಪ ಮಾಡಿದೆ. ನನ್ನ ಕ್ಷೇತ್ರದ ಸೋಮೇಶ್ವರ ಅಧಿಸೂಚಿತ ಪ್ರದೇಶವಾಗಿ ಯಾವುದೇ ಅಭಿವೃದ್ಧಿ ಕಾಮಗಾರಿ ಆಗಲಿಲ್ಲ. ಇದನ್ನು ಎರಡು ವರ್ಷದಿಂದ ಗ್ರಾಮ ಪಂಚಾಯಿತಿಯಾಗಲೀ, ನಗರಪಂಚಾಯಿತಿಯಾಗಲೀ ಯಾವುದೂ ಮಾಡಲಿಲ್ಲ. ಮೊನ್ನೆ ಕೇಳಿದಾಗ ಪಿ.ಜಿ.ಆರ್.ಸಿಂಧ್ಯಾರವರು ಎರಡು ದಿವಸದಲ್ಲಿ ಉತ್ತರವನ್ನು ಕೊಡುತ್ತೇನೆ ಎಂದು ಹೇಳಿದ್ದರು. ಇವೊತ್ತೂ ಕೂಡ ಉತ್ತರವನ್ನು ಕೊಡಲಿಲ್ಲ, ಎರಡು ಬಾರಿ ನೆನಪು ಮಾಡಿದೆ. ಇವರಿಗೆ ಒಂದು ಚುನಾವಣೆಯನ್ನು ಮಾಡಲಿಕ್ಕೆ ಇಷ್ಟು ಸಮಯ ಬೇಕೇ? ಸರ್ಕಾರ ಉತ್ತರ ಕೊಡುವುದಿಲ್ಲ, ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುತ್ತಾ ಇಲ್ಲ; ಮೊನ್ನೆ ನಾನು ಬಚ್ಚೇಗೌಡರ ಹತ್ತಿರ ಪುನಃ ವಿನಂತಿ ಮಾಡಿದೆ. ಕುಡಿಯುವ ನೀರಿಗೆ ಸ್ವಲ್ಪ ಹಣವನ್ನಾದರೂ ಕೊಡಿ ಎಂದು. ಅದನ್ನೂ ಕೂಡ ಮಾಡುವುದಿಲ್ಲ. ಸರ್ಕಾರ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ, ಆದ್ದರಿಂದ ಅನುಸೂಚಿತ ಪ್ರದೇಶಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು, ಚುನಾವಣೆ ಮಾಡುತ್ತಾರೋ ಇಲ್ಲವೋ?

ಅಧ್ಯಕ್ಷರು: ಒಂದು ಕೆಲಸ ಮಾಡೋಣ. ಎರಡು ಮೂರು ಸಲ ಈ ವಿಷಯ ಪ್ರಸ್ತಾಪವಾಗಿದೆ. ಪ್ರಶ್ನೋತ್ತರದಲ್ಲಿ ಸಮಯವನ್ನು ಕಳೆಯುವುದು ಬೇಡ, ನಾನು ಇವೊತ್ತೇ ಕಾರ್ಯದರ್ಶಿಗಳನ್ನು ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿಕೊಂಡು ವಿಚಾರವನ್ನು ತಿಳಿದುಕೊಂಡು ನಾಳೆ ಒಂದು ಹೇಳಿಕೆಯನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ: ಹುಕೇರಿ-ಸಂಕೇಶ್ವರಕ್ಕೆ ನೀರು ಸರಬರಾಜು.

487 (3541)

ಶ್ರೀ ಎ.ಬಿ.ಪಾಟೀಲ್ (ಸಂಕೇಶ್ವರ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಡಕಲ್ ಜಲಾಶಯದಿಂದ ಜಂಟಿ ನೀರು ಸರಬರಾಜು ಯೋಜನೆ ಅಡಿಯಲ್ಲಿ ಹುಕ್ಕೇರಿ-ಸಂಕೇಶ್ವರ ಮತ್ತು ಇತರ ಗ್ರಾಮಗಳಿಗೆ ನೀರು ಪೂರೈಸಲು ಇರುವ ಕಾಮಗಾರಿಯು ಯಾವಾಗ ಮಂಜೂರಾಗಿದೆ, ಇದಕ್ಕೆ ಎಷ್ಟು ಹಣವನ್ನು ಒದಗಿಸಲಾಗಿರುತ್ತದೆ. ಈ ಕಾಮಗಾರಿಯನ್ನು ಮುಕ್ತಾಯಗೊಳಿಸಲು ಎಷ್ಟು ವರ್ಷಗಳ ಅವಧಿಯನ್ನು ನಿಗಧಿಗೊಳಿಸಲಾಗಿದೆ.

ಆ) ಸದರಿ ಕಾಮಗಾರಿಯು ಯಾವ ಹಂತದಲ್ಲಿದ್ದು, ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ.